# ಜಾಲತಾಣದಲ್ಲಿ ಜಲಗಾರ ಜಾಣ



**ಮಂಡ್ಯದ ಪೌರಕಾರ್ಮಿಕ ರಘು, ಅಪ್ಪು ಅಭಿಮಾನಿ. ತಮ್ಮ ಕೆಲಸದ ಬಿಡುವಿನಲ್ಲಿ ಡಾನ್ಸ್ ಮಾಡುವುದು ಅವರ ಹವ್ಯಾಸ. ಕಾಯಕ ನಿಷ್ಠೆ ಜೊತೆ ಹವ್ಯಾಸವನ್ನು ಹರ್ಷದಿಂದ ಮುನ್ನಡೆಸುತ್ತಿರುವುದು ಅವರ ವಿಶೇಷ.**

■ ನಿರೂಪಣೆ: **ರಾಘವೇಂದ್ರ ಕೆ. ತೊಗರ್ಸಿ**

ನಾನೊಬ್ಬ ಜಲಗಾರ
ಅಂಜದಿರು, ಸೋದರನೆ! ಜಗದ ಜಲಗಾರ
ನಾನು! ಶಿವನೆಂದು ಕರೆಯುವರು ಎನ್ನ!
ರುದ್ರನೆಂಬರು ಎನ್ನ; ಶಿವನೆಂಬರೆನ್ನ;
ಹೇಸುವರು, ಅಂಜುವರು, ಜಲಗಾರನೆನಲು!

ಕುವೆಂಪು ಅವರ 'ಜಲಗಾರ' ನಾಟಕದಲ್ಲಿ ಪೌರಕಾರ್ಮಿಕನ ಕಾಯಕ ನಿಷ್ಠೆಗೆ ಮನಸೋತು ಪ್ರತ್ಯಕ್ಷನಾಗುವ ಶಿವ ಹೇಳುವ ಮಾತಿದು.

ಮಂಡ್ಯದ ಪೌರಕಾರ್ಮಿಕ ರಘು (raghu varan) ಅವರ ಡಾನ್ಸ್ ನೋಡಿದವರಿಗೆ 'ಜಲಗಾರ' ನಾಟಕದ ಶಿವನ ನೃತ್ಯದ ನೆನಪು ಆಗದೇ ಇರದು. ತಮ್ಮ ನೃತ್ಯದ ಪ್ಯಾಶನ್ ಕುರಿತು ಅವರು ಹೀಗೆ ಹೇಳುತ್ತಾರೆ...

ಮಂಡ್ಯದಲ್ಲಿ ಹುಟ್ಟಿ ಬೆಳೆದೆ. 15 ವರ್ಷದಿಂದ ಪೌರ ಕಾರ್ಮಿಕನಾಗಿದ್ದೇನೆ. 10ನೇ ತರಗತಿ ಫೇಲಾದ ಮೇಲೆ ಗಾರೆ ಕೆಲಸಕ್ಕೆ ಹೊರಟೆ. ಅಪ್ಪ ಆ ಕೆಲಸವನ್ನು ಬಿಡಿಸಿ, ನಗರಸಭೆಗೆ ಸೇರಿಸಿದರು. ಈಗಲೂ ಅದೇ ಕೆಲಸ ಮಾಡುತ್ತಿದ್ದೇನೆ. ಮೊದಲಿನಿಂದಲೂ ಡಾನ್ಸ್ ಎಂದರೆ ನನಗೆ ಪಂಚಪ್ರಾಣ. ಆರಂಭದಲ್ಲಿ ಟೀವಿಯಲ್ಲಿ ಬರುವ ಹಾಡುಗಳನ್ನು ನೋಡಿ ಅಭ್ಯಾಸ ಮಾಡುತ್ತಿದ್ದೆ. ಈಗ ಮೊಬೈಲ್‌ನಲ್ಲಿಯೇ ಡಾನ್ಸ್ ನೋಡಿ ಸ್ಟೆಪ್ ಹಾಕುತ್ತಿದ್ದೇನೆ.

ಡಾನ್ಸ್ ಅಭ್ಯಾಸ ಬಲದಿಂದಲೇ ಮಾಡುತ್ತೇನೆ. ಇದಕ್ಕಾಗಿ ವಿಶೇಷ ಕಸರತ್ತು ಮಾಡುವುದಿಲ್ಲ. ಕೆಲಸದ ಅವಧಿಯಲ್ಲಿ ಬಿಡುವು ಸಿಕ್ಕಾಗ ಒಂದಾದರೂ ಡಾನ್ಸ್ ಮಾಡುತ್ತೇನೆ. ಅದನ್ನೇ ಇನ್‌ಸ್ಟಾಗ್ರಾಮ್ ಮತ್ತು ಫೇಸ್‌ಬುಕ್‌ನಲ್ಲಿ ಹಾಕುತ್ತೇನೆ. ರೀಲ್ಸ್ ನೋಡುತ್ತಿದ್ದವನಿಗೆ ಅದೇ ಪ್ರೇರಣೆಯಾಯಿತು. ಈ ಮೂಲಕ ಪೌರಕಾರ್ಮಿಕ ಕೆಲಸದ ರೀತಿ ನೀತಿಗಳನ್ನು ತಿಳಿಸುತ್ತಿದ್ದೇನೆ. ಆರಂಭದ ದಿನಗಳಲ್ಲಿ ಅಸ್ಪೃಶ್ಯತೆಯ ನಂಜನ್ನು ಸ್ವತಃ ಅನುಭವಿಸಿದ್ದೇನೆ. ಕುಡಿಯಲು ನೀರೂ ಕೊಡುತ್ತಿರಲಿಲ್ಲ. ಮನೆಯ ಎದುರಿಗೆ ನಿಂತರೆ ದೂರಕ್ಕೆ ನಿಲ್ಲಲು ಸನ್ನೆ ಮಾಡುತ್ತಿದ್ದರು. ಈಗ ಆ ಪ್ರಮಾಣದಲ್ಲಿ ಇಲ್ಲ. ಆ ಕೀಳರಿಮೆಯಿಂದ ಹೊರಬರಲು ಈ ಡಾನ್ಸ್ ಸಹಕಾರಿಯಾಗಿದೆ.

ಪುನೀತ್ ರಾಜ್‌ಕುಮಾರ್ ಅವರ ಅಪ್ಪಟ ಅಭಿಮಾನಿ. ಅಪ್ಪು ಅವರ ಬಹುತೇಕ ಹಾಡುಗಳಿಗೆ ಸ್ಟೆಪ್ ಹಾಕಿದ್ದೇನೆ. ಅವರನ್ನು ಬಿಟ್ಟರೆ ಪ್ರಭುದೇವ ಮತ್ತು ರಾಘವ್ ಲಾರೆನ್ಸ್ ಇಷ್ಟ ಆಗ್ತಾರೆ. ಅವರ ಡಾನ್ಸ್‌ಗಳನ್ನೂ ಅನುಕರಿಸುತ್ತೇನೆ. ಯಾವುದೇ ಡಾನ್ಸ್ ಇರಲಿ. ಎರಡು ಮೂರು ಬಾರಿ ನೋಡುತ್ತಾ ಮನಸಿನಲ್ಲಿಯೇ ಪ್ಲಾನ್ ಮಾಡಿಕೊಳ್ಳುತ್ತೇನೆ. ಸ್ಪಾಟ್‌ನಲ್ಲಿಯೇ ಡಾನ್ಸ್ ಮಾಡುತ್ತೇನೆ. ಕೆಲವು ಡಾನ್ಸ್‌ಗಳಿಗೆ ಸಿನಿಮಾ ದೃಶ್ಯವನ್ನೂ ಕೊಲಾಜ್ ಮಾಡಿರುತ್ತೇನೆ. ನೋಡಿದ ಕೆಲವರು ಯಥಾವತ್ತು ಡಾನ್ಸ್ ಮಾಡಿರುವ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾರೆ. ಯೂಟ್ಯೂಬ್ ನೋಡಿಯೇ ಎಡಿಟ್ ಮಾಡುವುದನ್ನು ಕಲಿತಿದ್ದೇನೆ.

ಈ ಹಿಂದೆ ಒಂದು ತಂಡವನ್ನು ಕಟ್ಟಿಕೊಂಡಿದ್ದೆ. ಸಾರ್ವಜನಿಕ ಉತ್ಸವಗಳಲ್ಲಿ ಆ ತಂಡ ಪ್ರದರ್ಶನ ಮಾಡುತ್ತಿತ್ತು. ಮನೆ ಹತ್ತಿರದಲ್ಲೇ ಇದ್ದ ಶಾಲೆಯಲ್ಲಿ ಬೆಳಿಗ್ಗೆ ನಾವು ಡಾನ್ಸ್ ಕಲಿಯುತ್ತಿದ್ದೆವು. ಸೀಸನ್ನಿನ ಆ ಕೆಲಸ ದೀರ್ಘ ಕಾಲ ಉಳಿಯಲಿಲ್ಲ. ಗೆಳೆಯರೇ ನಾಲ್ವರು ಇದ್ದೆವು. ಅದಕ್ಕೆ ವೃತ್ತಿಪರ ತಿರುವು ನೀಡಲು ಸಾಧ್ಯ ಇರಲಿಲ್ಲ. ಆ ನಮ್ಮ ಸಾಹಸಕ್ಕೆ ಈಗ ಸುಮಾರು ಹತ್ತು ವರ್ಷ ತುಂಬಿರಬಹುದು. ಆದರೆ ನನ್ನ ಡಾನ್ಸ್ ಪ್ರೀತಿ ಮಾತ್ರ ಕುಂದಲಿಲ್ಲ. ನನ್ನ ಪಾಡಿಗೆ ಇದೇ ರೀತಿ ಡಾನ್ಸ್ ಮಾಡುತ್ತೇನೆ. ಸೈಡ್ ಡಾನ್ಸ್ ಆದರೆ ಅಷ್ಟೇ ಸಾಕು ಎನ್ನುವುದು ನನ್ನ ಬಹುದೊಡ್ಡ ಕನಸು.

## ಸಿಕ್ಕ ಅವಕಾಶವನ್ನು ತಪ್ಪಿಸಿಕೊಂಡೆ!

ಮೂರು ವರ್ಷದಿಂದ ರೀಲ್ಸ್ ಮಾಡುತ್ತಿದ್ದೇನೆ. ಇತ್ತೀಚೆಗೆ ಹೆಚ್ಚು ಜನರನ್ನು ವಿಡಿಯೊಗಳು ತಲುಪುತ್ತಿವೆ. ಭೇಟಿ ಆದವರು ತುಂಬ ಪ್ರೀತಿಯಿಂದ ಮಾತನಾಡಿಸುತ್ತಾರೆ. ನಗರಸಭೆಯ ಅಧಿಕಾರಿಗಳು ನನ್ನ ನೃತ್ಯವನ್ನು ನೋಡಿ ಖುಷಿಪಡುತ್ತಾರೆ. 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಪ್ರೋತ್ಸಾಹದ ಮಾತುಗಳನ್ನು ಹೇಳುತ್ತಾರೆ.

ಈ ಹಿಂದೆ ಒಮ್ಮೆ 'ಡಿಕೆಡಿ'ಗೆ ಭಾಗವಹಿಸಿದ್ದೆ. ನಮ್ಮ ಆರ್ಥಿಕ ಪರಿಸ್ಥಿತಿಗೆ ಕೆಲಸವನ್ನು ಬಿಟ್ಟು ಹೋಗುವ ಹಾಗಿರಲಿಲ್ಲ. ತುಂಬ ಯೋಚನೆ ಮಾಡಿ ಆ ಅವಕಾಶವನ್ನು ಬಿಡಲೇಬೇಕಾಯಿತು. ಅಂತಹ ಅನಿವಾರ್ಯತೆಯಲ್ಲಿ ಕುಟುಂಬ ಇದೆ. ಹೀಗಿರುವಾಗ ಕೆಲಸ ಬಿಟ್ಟು ಬೆಂಗಳೂರಿಗೆ ಬಂದು ಇರುವುದು ಕಷ್ಟ ಆಯಿತು. ಕೇವಲ 500 ರೂಪಾಯಿ ಇಟ್ಟುಕೊಂಡು ಬಂದವನಿಗೆ ಒಂದು ವಾರ ಹೇಗೆ ಕಾಲ ಕಳೆಯುವುದು ಎನ್ನುವ ಚಿಂತೆಯಿಂದಲೇ ಬಿಟ್ಟು ಬಂದೆ. ಮೊದಲ ಮತ್ತು ಎರಡನೇ ಸುತ್ತಿನಲ್ಲಿ ಆಯ್ಕೆ ಆಗಿದ್ದಕ್ಕೆ ಖುಷಿಯಾಗಿತ್ತು. ಮೆಗಾ ಆಡಿಷನ್ ಪ್ರದರ್ಶನಕ್ಕೆ ತರಬೇತಿ ತೆಗೆದುಕೊಳ್ಳಬೇಕಿತ್ತು. ಅವಕಾಶ ತಪ್ಪಿಸಿಕೊಂಡಿದ್ದಕ್ಕೆ ತುಂಬ ನೋವಿನಲ್ಲೇ ಮರಳಿದೆ.

ರಿಯಾಲಿಟಿ ಶೋನಲ್ಲಿ ಅವಕಾಶ ಸಿಕ್ಕರೆ ಅದನ್ನು ಬಳಸಿಕೊಳ್ಳಬೇಕು ಎನ್ನುವ ಆಸೆ ಅದಮ್ಯವಾಗಿ ಕಾಡುತ್ತಿದೆ. ನಟ ಶಿವರಾಜ್ ಕುಮಾರ್ ಅವರ ಯಾವುದಾದರೂ ಸಿನಿಮಾ ಅಥವಾ ಕಾರ್ಯಕ್ರಮದ ಡಾನ್ಸ್‌ನಲ್ಲಿ ಸೈಡ್ ನಿಂತರೂ ಸಾರ್ಥಕ ಎಂದುಕೊಂಡಿದ್ದೇನೆ. ಖಂಡಿತ ಅಂತಹ ಒಂದು ಅವಕಾಶ ಸಿಗಬಹುದು ಎನ್ನುವುದು ನನ್ನ ನಿರೀಕ್ಷೆ. ಅದೇ ಕನಸಿನಲ್ಲಿ ಪ್ರತಿ ದಿನ ಒಂದಾದರೂ ವಿಡಿಯೊ ಮಾಡುತ್ತೇನೆ. ಡಾನ್ಸ್‌ಗೆ ತಾಲೀಮು ಅಗತ್ಯ ಅನ್ನಿಸಿದರೆ ಮಾತ್ರ ಸಂಜೆ ಮನೆಯಲ್ಲಿ ತಾಲೀಮು ಮಾಡಿ ಮರುದಿನ ವಿಡಿಯೊ ಮಾಡುತ್ತೇನೆ. ■

